ಶ್ರೀ ಕೆ. ಹರ್ಷಕುಮಾರ್ ಗೌಡ : ತಾವು ಮೊದಲೂ ಗ್ರಾಮೀಣಾಭಿವೃದ್ಧಿ ಮಂತ್ರಿಗಳಾಗಿದ್ದಿರಿ. ಈಗಲೂ ಆಗಿದ್ದೀರಿ. ಆಂಧ್ರದ ಎಲ್ಲಾ ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮ ಆಗಿದೆ. ನಮ್ಮಲ್ಲಿ ಏಕೆ ಆಗಿಲ್ಲ? ಡಿಲೇ ಆಗಿಲ್ಲ ಎಂದು ಹೇಳಬಹುದು. ಆಂಧ್ರದಲ್ಲಿ ಮಂಡಲ ಮಟ್ಟದಲ್ಲಿ ಆಗಿದೆ. ಕೇಂದ್ರದಿಂದ ಬರತಕ್ಕ ಸೌಲಭ್ಯಗಳನ್ನು ರಾಜ್ಯಕ್ಕೆ ತೆಗೆದುಕೊಳ್ಳುವುದರಲ್ಲಿ ಅಧಿಕಾರಿಗಳ ವೈಪಲ್ಯ ಎದ್ದು ಕಾಣುತ್ತದೆ. ಅದಕ್ಕಾಗಿ ಈ ಪ್ರಶ್ನೆ ಕೇಳಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ತಮಗೆ ಗೊತ್ತಿರುವ ಹಾಗೆ ಟೆಕ್ನಿಕಲ್ ಮಿಷನ್ ಪ್ರಕಾರ ಮಾಡಿರತಕ್ಕ ಕಾರ್ಯಕ್ರಮ. ಇದನ್ನು ಕೆಲವೇ ಹಳ್ಳಿಗಳಲ್ಲಿ ತೆಗೆದುಕೊಂಡಿರುವುದು ನಿಜ. ಈ ಒಂದು ಅನುಭವದಿಂದ ಇನ್ನೂ ಕೆಲವು ಹಳ್ಳಿಗಳಲ್ಲಿ ಇದೇ ಕಾರ್ಯಕ್ರಮ ಮುಂದುವರಿಸಬೇಕೆಂದು ತಮ್ಮ ಅಭಿಪ್ರಾಯ ಇದ್ದರೆ ಇದರ ಬಗ್ಗೆ ನಾನು ಸಹಕಾರ ಕೊಡುವುದಕ್ಕೆ ತಯಾರು ಇದ್ದೇನೆ. ಇದು ಕೇಂದ್ರ ಸರ್ಕಾರದ ಒಂದು ಕಾರ್ಯಕ್ರಮ.

ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಭಾರಿ ಮತ್ತು ಕಿರು ನೀರು ಸರಬರಾಜು ಯೋಜನೆಗಳ ಸಂಖ್ಯೆ

1056-ಶ್ರೀ ಸಾದತ್ ಆಲಿ ಖಾನ್ (ಚೆನ್ನಪಟ್ಟಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *1989-90, 1990-91 ಮತ್ತು 1991-92 ಇಲ್ಲಿಯವರೆಗೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೈಗೆತ್ತಿಕೊಳ್ಳಲಾದ ಭಾರಿ ನೀರು ಸರಬರಾಜು ಯೋಜನೆ ಮತ್ತು ಕಿರುನೀರು ಸರಬರಾಜು ಯೋಜನೆಗಳ ಒಟ್ಟು ಸಂಖ್ಯೆ (ಹಳ್ಳಿವಾರು ವಿವರಗಳನ್ನು ಒದಗಿಸುವುದು)?*

2) *ಮೇಲಿನ ತಾಲ್ಲೂಕಿನಲ್ಲಿ ಕಟ್ಟಬೇಕಾಗಿರುವ ಬಾಕಿ ಉಳಿದಿರುವ ತೊಟ್ಟಿಗಳ ಸಂಖ್ಯೆ (ಹಳ್ಳಿವಾರು ವಿವರಗಳನ್ನು ಒದಗಿಸುವುದು)?*

3) *ಯಾವಾಗ ಇವುಗಳನ್ನು ಪೂರ್ಣಗೊಳಿಸಲಾಗುವುದು?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೈಗೆತ್ತಿಕೊಳ್ಳಲಾದ ಭಾರಿ ನೀರು ಸರಬರಾಜು ಯೋಜನೆಗಳ ಮತ್ತು ಕಿರು ನೀರು ಸರಬರಾಜು ಯೋಜನೆಗಳ ಸಂಖ್ಯೆ ಈ ಕೆಳಕಂಡಂತಿದೆ:

	ಭಾರಿ ನೀರು ಸರಬರಾಜು ಯೋಜನೆ ಸರಬರಾಜು (ಕೊಳ್ಳಾಯಿ ನೀರು ಸರಬರಾಜು ಯೋಜನೆ)	*ಕಿರು ನೀರು ಯೋಜನೆ*
1989-90	11	8
1990-91	18	12
1991-92	5	4
1992-93	ಈವರೆಗೆ 1	4

(ಹಳ್ಳಿವಾರು ವಿವರಗಳನ್ನು ಲಗತ್ತಿಸಿದೆ)

2) 12 (ಹಳ್ಳಿವಾರು ವಿವರಗಳನ್ನು ಲಗತ್ತಿಸಿದೆ).

3) 5 ತೊಟ್ಟಿಗವನ್ನು 30.6.1993ರ ವೇಳೆಗೆ ಮತ್ತು ಉಳಿದ 7 ತೊಟ್ಟುಗಳನ್ನು 30-9-93ರ ವೇಳೆಗೆ ಪೂರ್ಣಗೊಳಿಸಲಾಗುವುದು.

ಅನುಬಂಧ

ಭಾರಿ ನೀರು ಸರಬರಾಜು ಯೋಜನೆಗಳು (ಕೊಳಾಯಿ ನೀರು ಸರಬರಾಜು ಯೋಜನೆ)

1989-90

1) ತಗಚಗೆರೆ (2) ಮುಕುಂದ (3) ವಂದಾರಗುಪ್ಪೆ (4) ಮತ್ತಿಕೆರೆ (5) ವಿರೂಪಾಕ್ಷಿಪುರ (6) ಮಣಸಿಗಾನಹಳ್ಳಿ (7) ಮುಂಗಡಿಹಳ್ಳಿ (8) ಹನಿಯೂರು (9) ಹುಡಿಕೆ ಹೊಸಹಳ್ಳಿ (10) ಹಾರೋಕೊಪ್ಪ (11) ಮುದಿಗೆರೆ

1990-91

1) ಬೇವೂರು (2) ಕದರಮಂಗಲ (3) ದಶಾವರ (4) ಸಂಕಲಗೆರೆ (5) ಸುಳ್ಳೇರಿ (6) ಹೊನ್ನಾಯ್ಕನ ಹಳ್ಳಿ (7) ಪಟ್ಲು (8) ಹೊಂಗನೂರು (9) ಇಗ್ಗಲೂರು ಎಕೆಸಿ (10) ಕೂಡುವಾರು (11) ನಾಗಾವರ (12) ಮಾಲೂರು ಪಟ್ಟಣ (13) ಮಾಕಳಿ (14) ಸೋಗಾಲ (15) ಮಲ್ಲೂರು (16) ಅಬ್ಬೂರು (17) ಮಂಡ್ಯ ಬೊಮ್ಮನಾಯ್ಕನ ಹಳ್ಳಿ (18) ಮೈಲನಾಯಕನಹಳ್ಳಿ.

1991-92

1)ಚಕ್ಕೆರೆ (2) ಅಕ್ಕೂರು (3) ಎಸ್.ಎಂ. ಹಳ್ಳಿ (4) ಮೋಲೆ ದೊಡ್ಡಿ (5) ನೆರಳೂರು

1992-93

1) ಹರೂರು

ಕಿರು ನೀರು ಸರಬರಾಜು ಯೋಜನೆ

1989-90

1) ಅಂಬಾಡಿಹಳ್ಳಿ (2) ಸರಗೂರು (3) ಕೊಂಡಾಪುರ (4) ಬಾಚಹಳ್ಳಿ (5) ಅಪ್ಪಗೆರೆ (6) ಪೀಠಲ್ಲಿದೊಡ್ಡಿ (7) ಕೋಡಿಹೊಸಹಳ್ಳಿ (8) ಕುಂತೂರು ದೊಡ್ಡಿ.

1990-91

1) ಚಿಕ್ಕಲೂರು (2) ಗೌಡಗೆರೆ (3) ಅಮ್ಮಲ್ಲಿದೊಡ್ಡಿ (4) ಹುಲುವಾಡಿ (5) ಸುಣ್ಣೇರು (6) ಅಬ್ಬೂರುದೊಡ್ಡಿ (7) ಜಾಗದಪುರ (8) ನಿಟ್ಟೇನಹಳ್ಳಿ (9) ಬೈರಶೆಟ್ಟಿಹಳ್ಳಿ 10) ಬಲ್ಲಾಪಟ್ಟಣ (11) ಬಾಚೆಟಹಳ್ಳಿ (12) ಸಿಡಗಾನಹಳ್ಳಿ

1991-92

1) ಬೆಳ್ಕೆರೆ (2) ಬಿ.ವಿ.ಪಾಳ್ಯ (3) ಸೀಬನಹಳ್ಳಿ (4)ಕೊಲ್ಲಾಪುರ

1992-93

(1) ಸೋಗಾಲ (2) ಕರನಹಳ್ಳಿ (3) ಮೋಲೆ (4) ಮಾದಾಪುರ

ನಿರ್ಮಿಸಲು ಬಾಕಿ ಇರುವ ಟ್ಯಾಂಕುಗಳ ವಿವರಗಳು

30-6-93ರ ವಳಗೆ ಮುಗಿಸಲ್ಪಡುವ ಟ್ಯಾಂಕುಗಳ ವಿವರಗಳು

1) ಸಂಕಲಗೆರೆ (2) ಪುಡಿಕೆಹೊಸಹಳ್ಳಿ (3) ಮುಡಿಗೆರೆ (4) ಮತ್ತಿಕೆರೆ (5) ಸುಳ್ಳೇರಿ

30-9-93ರ ವಳಗೆ ಮುಗಿಸಲ್ಪಡುವ ಟ್ಯಾಂಕುಗಳ ವಿವರಗಳು

1) ವಂದಾರಗುಪ್ಪೆ (2) ಅಕ್ಕಬರು (3) ಚಕ್ಕೆರೆ (4) ಮಾಲೂರು ಪಟ್ಟಣ (5) ನೆರಳೂರು (6) ಮೋಲೆ ದೊಡ್ಡಿ (7) ಹರೂರು.

ಶ್ರೀ ಸಾದತ್ ಆಲಿ ಖಾನ್ : ನನಗೆ ಇಲ್ಲಿ ವಿವರವಾದ ಉತ್ತರ ಬಂದಿದೆ. ಇದರಲ್ಲಿ ಒಂದು ಇಂಜಸ್ಟೀಸ್ ಆಗಿದೆ. 1992-93ನೇ ಸಾಲಿನಲ್ಲಿ ಚನ್ನಪಟ್ಟಣ ತಾಲ್ಲೂಕಿಗೆ 12 ಬಾರಿ ನೀರು ಸರಬರಾಜು ಯೋಜನೆಗಳನ್ನು ಕೇಳಿದ್ದು, ತಮ್ಮ ಉತ್ತರದ ಪ್ರಕಾರ ಕೊಟ್ಟಿರುವುದು ಕೇವಲ 1 ಮಾತ್ರ. ಇದರಿಂದಾಗಿ ಬೆಂಗಳೂರು ರೂರಲ್ ಜಿಲ್ಲಾಪರಿಷತ್ತಿನಲ್ಲಿ ಬಹಳ ಇಂಜಸ್ಟೀಸ್ ಆಗಿದೆ. ಮತ್ತು ಕಿರು ನೀರು ಸರಬರಾಜು ಯೋಜನೆ ಕೇವಲ 4 ಕೊಟ್ಟಿದ್ದೀರಿ. ಈ ವಿಚಾರವಾಗಿ ಎನ್‌ಕ್ವಯರಿ ಮಾಡಿ. ಮತ್ತೆ ಮೇಜರ್ ವಾಟರ್ ಟ್ಯಾಂಕ್‌ಗಳು 12 ಏನು ಕೈಗೆತ್ತಿಕೊಳ್ಳಲಾಗಿತ್ತು ಅವು ಇನ್‌ಕಂಪ್ಲೀಟ್ ಆಗಿವೆ. ನವೆಂಬರ್‌ನಲ್ಲಿ ಕಂಪ್ಲೀಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ : ಚನ್ನಪಟ್ಟಣ ತಾಲ್ಲೂಕಿನ ಬಗ್ಗೆ ನಮಗೆ ತಿಳಿದ ಮಟ್ಟಿಗೆ ಸಾಕಷ್ಟು ಮಾಹಿತಿಗಳನ್ನು ನಾವು ಒದಗಿಸಿಕೊಟ್ಟಿದ್ದೇವೆ. ಇನ್ನೂ ಕಟ್ಟದೆ ಬಾಕಿ ಉಳಿದಿರುವ ತೊಟ್ಟಿಗಳ ಸಂಖ್ಯೆ 12 ಎಂದು ಹೇಳಿದ್ದೇನೆ. ಇವುಗಳಲ್ಲಿ 5 ಟ್ಯಾಂಕುಗಳನ್ನು ಜೂನ್ ಒಳಗೆ ಹಾಗೂ ಮಿಕ್ಕ 7ನ್ನು ಸೆಪ್ಟಂಬರ್ ಮೂವತ್ತರ ಳಗೆ ಪೂರ್ಣಗೊಳಿಸಲಾಗುವುದೆಂದು ಹೇಳಿದ್ದೇನೆ. ಸಾಮಾನ್ಯವಾಗಿ ಇಷ್ಟೊಂದು ವಿವರಗಳು ಇಂತಹ ಪ್ರಶ್ನೆಗೆ ಕೊಡುವುದು ಬಹಳ ಕಷ್ಟವಾಗುತ್ತದೆ. ಆದರೂ ಕೂಡ ಎಷ್ಟು ಸಾಧ್ಯವೋ ಅಷ್ಟೂ ವಿವರಗಳನ್ನು ಕೊಟ್ಟಿದ್ದೇವೆ. ಆದರೂ ಅನ್ಯಾಯವಾಗಿದೆ ಎಂದರೆ ಏನು ಉತ್ತರ ಹೇಳಲಿ ?

ಶ್ರೀ ಸಾದತ್ ಆಲಿ ಖಾನ್ : ಅನ್ಯಾಯ ಎಂದರೆ, 1992-93ಕ್ಕೆ 12 ಮೇಜರ್ ವಾಟಕ್ ಸಪ್ಲೈ ಸ್ಕೀಮ್ ಕೇಳಿದ್ದು, ಕೊಟ್ಟಿರುವುದು ಕೇವಲ 1 ಮಾತ್ರ.

ಶ್ರೀ ಎಂ.ವೈ. ಘೋರ್ಪಡೆ : ಕೊಳಾಯಿ ನೀರು ಸರಬರಾಜು ಯೋಜನೆಯಾಗಲೀ, ಮಿನಿ ವಾಟಕ್ ಸಪ್ಲೈ ಆಗಲೀ, ಬೋರ್ವೆಲ್ ಆಗಲೀ ತಾವು ಕೇಳಿದ್ದೆಲ್ಲಾ ತಕ್ಷಣ ಮಾಡುವುದಕ್ಕೆ ಆಗುವುದಿಲ್ಲ.

12.05 ಪಿ.ಎಂ.

ಉದ್ದೇಶಪೂರ್ವಕವಾಗಿ ನ್ಯಾಯವಾದಂಥ ಪೈಪ್ ವಾಟರ್ ಸ್ಕೀಮ್, ಮಿನಿ ವಾಟರ್ ಸ್ಕೀಮು ಇದ್ದು ಅದನ್ನು ಅವರು ತೆಗೆದುಕೊಂಡಿಲ್ಲವೆಂದು ನೀವು ಹೇಳುವುದಾದರೆ certainly I will look into it.